# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/48 /22-23

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಪ್ರಕಾಶನಗರ, ವಾರ್ಡ್ ಮಟ್ಟದ ಸಮಿತಿ
ಪ್ರಕಾಶನಗರ, ವಾರ್ಡ್ ಸಂ.140
ಬೆಂಗಳೂರು, ದಿನಾಂಕ: 18/01/2023

**ದಿನಾಂಕ: 07/01/2023 ರಂದು ಬೆಳಗ್ಗೆ 11.30 ಗಂಟೆಗೆ ನಡೆದ ಸಭಾ ನಡವಳಿಗಳು:**
**ಸಭೆಯಲ್ಲಿ ಹಾಜರಿದ್ದವರು.**

ಸಭೆಗೆ ಹಾಜರಿದ್ದ ವಾರ್ಡ್ ಕಮಿಟಿ ಅಧಿಕಾರಿ/ಸದಸ್ಯರು :

1. ಶ್ರೀ ಕೆ.ಪಿ ಯೋಗೇಶ್ ಸ.ಕಾ.ನಿ.ಅ ಹಾಗೂ ನೋಡೆಲ್ ಅಧಿಕಾರಿ
2. ಕುಮಾರಿ॥ ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು
3. ಶ್ರೀ ಲಕ್ಷ್ಮೀನಾರಾಯಣ.ಆರ್ ಬಿ.ಜೆ.ಪಿ
4. ಶ್ರೀ ರಮೇಶ್ ಕಾರ್ಯದರ್ಶಿ
5. ಶ್ರೀ ಬಿ.ಎಸ್.ನಾಗರಾಜ್ ಎ.ಎಸ್.ಐ
6. ಶ್ರೀ. ರಾಘವೇಂದ್ರ ಪೊಲೀಸ್ ಇಲಾಖೆ
7. ಶ್ರೀ ರವಣಯ್ಯ ಕಿರಿಯ ಆರೋಗ್ಯ ಪರಿವೀಕ್ಷಕರು.
8. ಶ್ರೀ ಆದಿನಾರಾಯಣ ಹಿರಿಯ ಆರೋಗ್ಯಾಧಿಕಾರಿ
9. ಶ್ರೀ ಹನುಮಂತ್ ರಾವ್ ಬಿ.ಜೆ.ಪಿ
10. ಡಾ॥ ಶೀಲಾ ಆರ್. ಪ್ರಸಾದ್ ಆರೋಗ್ಯಾ ಇಲಾಖೆ
11. ಶ್ರೀಮತಿ ಸುಧಾ.ಜಿ ಆರೋಗ್ಯಾ ಇಲಾಖೆ
12. ಶ್ರೀಮತಿ ಮಮತಾ ಆರೋಗ್ಯಾ ಇಲಾಖೆ
13. ಶ್ರೀಮತಿ ಕವಿತಾ ಬಿ.ಎಲ್ ಆರೋಗ್ಯಾ ಇಲಾಖೆ
14. ಶ್ರೀ ಶಿವಕುಮಾರ್ ಪಿ.ಹೆಚ್.ಸಿ.ಓ
15. ಶ್ರೀ ಭರತ್.ಎಸ್.ಎಮ್ ಪಿ.ಹೆಚ್.ಸಿ.ಓ
16. ಶ್ರೀಮತಿ ಅಫೀಯಾನ ಹೆಚ್.ಐ.ಓ
17. ಶ್ರೀ ಶಿವಕುಮಾರ್.ಕೆ.ಕೆ ಎ.ಎಸ್.ಐ

ಸಹಾಯಕ ಅಭಿಯಂತರರು ಕಾರ್ಯದರ್ಶಿ ಮತ್ತು ಸಂಚಾಲಕರು, ಸ.ಅ, ವಾರ್ಡ್ ಸಂ.140 (ಹಳೆ ನಂ.98) ವಾರ್ಡ್ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ ಸದಸ್ಯರು ಹಾಗು ಪಾಲಿಕೆಯ ಅಧಿಕಾರಿಗಳು ತಮ್ಮ ಪರಿಚಯ ನೀಡಿ ಸಭೆಯನ್ನು ಪ್ರಾರಂಭಿಸಲಾಯಿತ್ತು.

1. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪಿಹೆಚ್‌ಸಿಓ ಕೇಂದ್ರದಲ್ಲಿ ನೀರಿನ ಸಮಸ್ಯೆ ಉಂಟಾಗಿದ್ದು ನೀರಿನ ತೊಟ್ಟಿ ಸೋರುವಿಕೆಯಿಂದ ನೀರಿನ ಸಮಸ್ಯೆ ಉಂಟಾಗಿದೆ ಎಂದು ಪಿಹೆಚ್‌ಸಿಓ ಸಿಬ್ಬಂದಿಗಳು ಹೊಸದಾಗಿ ನೀರಿನ ತೊಟ್ಟಿ ಕಟ್ಟಿಸಿ ಕೊಡಲು ಹಾಗೂ ಪ್ಲಂಬಿಂಗ್ ವರ್ಕ್ ತುರ್ತಾಗಿ ಮಾಡಿಸಿ ಕೊಡಲು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.

2. ಪಿಹೆಚ್‌ಸಿಓ ಕೇಂದ್ರದ ಹತ್ತಿರ ಒಣತ್ಯಾಜ್ಯ ಕೇಂದ್ರವಿದು ಅಲ್ಲಿ ಸೊಳ್ಳೆಗಳು ಹೆಚ್ಚಾಗಿದೆ ಎಂದು ಪಿಹೆಚ್‌ಸಿಓ ಸಿಬ್ಬಂದಿಗಳು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಫಾಗಿಂಗ್ ಮಾಡಿಸಿಕೊಡಲು ಆರೋಗ್ಯಾ ಇಲಾಖೆಯವರಿಗೆ ನಿರ್ದೇಶನ ನೀಡಿದರು.
3. ಕೋವಿಡ್ ಹೆಚ್ಚಾಗುತ್ತಿರುವ ಕಾರಣ ಕೋವಿಡ್ ವ್ಯಾಕ್ಸಿನನ್ನು ಸಾರ್ವಜನಿಕರಿಗೆ ಹಾಕಿಸಿಕೊಳ್ಳಲು ಪಿಹೆಚ್‌ಸಿಓ ಸಿಬ್ಬಂದಿಯವರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಅಲ್ಲೇ ಇರುವ ಸಭೆಯ ಸದಸ್ಯರುಗಳಿಗೆ ಕೋವಿಡ್ ವ್ಯಾಕ್ಸಿನನ್ನು ಹಾಕಿಸಿಕೊಳ್ಳಲು ಸಾರ್ವಜನಿಕರಿಗೆ ತಿಳಿಸುವಂತೆ ನಿರ್ದೇಶನ ನೀಡಿದರು.
4. ಗಾಯಿತ್ರಿದೇವಿ ಉದ್ಯಾನವನದಲ್ಲಿ ಯೋಗಭ್ಯಾಸ ಮಾಡುವುದಕ್ಕಾಗಿ ಒಂದು ಗಂಟೆಗಳ ಕಾಲ ಹೆಚ್ಚಿನ ಕಾಲವಕಾಶ ನೀಡಲು ಪಿಹೆಚ್‌ಸಿ ಸಿಬ್ಬಂದಿಯವರು ಸಭೆಗೆ ಕೋರಿರುತ್ತಾರೆ. ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಉದ್ಯಾನವನ ನಿರ್ವಹಣೆ ಮಾಡುತ್ತಿರುವವರಿಗೆ ನಿರ್ದೇಶನ ನೀಡಿದರು.
5. ವಾರ್ಡ್ ವ್ಯಾಪಿಯಲ್ಲಿ ಬರುವ ಬ್ರಿಡ್ಜ್ ಸ್ಟೋನ್ ಹತ್ತಿರ ಬೀದಿ ದೀಪಗಳ ದುರಸ್ಥಿ ಮಾಡಿಕೊಡುವಂತೆ ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
6. ವಾರ್ಡ್ ವ್ಯಾಪಿಯಲ್ಲಿ ಬರುವ ಎಲ್ಲಾ ರಸ್ತೆಗಳಿಗೆ ಡಾಂಬರೀಕರಿಸುವಂತೆ ಸಾರ್ವಜನಿಕರು ಸಭೆಗೆ ತಿಳಿಸಿದರು ಆಗ ನೋಡಲ್ ಅಧಿಕಾರಿಗಳು ಮುಂದಿನ ವಾರದಿಂದ ಎಲ್ಲಾ ರಸ್ತೆಗಳ ಡಾಂಬರೀಕರಣ ಪ್ರರಂಭವಾಗುತ್ತದೆ ಎಂದು ತಿಳಿಸಿದರು.

ಮುಂದುವರೆದಂತೆ, ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಕುಮಾರಿ॥ ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು ರವರು ಎಲ್ಲಾರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ,**

ನೋಡಲ್ ಅಧಿಕಾರಿ
ವಾರ್ಡ್ ಸಂ.140

ಕಾರ್ಯದರ್ಶಿ
ವಾರ್ಡ್ ಸಂ.140